ಕಲರ್ಸ್ ಕನ್ನಡ

# ಹೊಸ ಧಾರಾವಾಹಿ ನಿನಗಾಗಿ

## ಧಾರಾವಾಹಿಗೆ ಕಾಲಿಟ್ಟ ದಿವ್ಯಾ ಉರುಡುಗ



ಬಿಗ್‌ಬಾಸ್ ಮೂಲಕ ಮನೆಮಾತಾದ ಚಿತ್ರನಟಿ ದಿವ್ಯಾ ಉರುಡುಗ ಈಗ ಮತ್ತೆ ಕಿರುತೆರೆಯತ್ತ ಮುಖ ಮಾಡಿದ್ದಾರೆ. ಕಲರ್ಸ್ ಕನ್ನಡದ ಹೊಸ ಧಾರಾವಾಹಿ 'ನಿನಗಾಗಿ'ಯಲ್ಲಿ ದಿವ್ಯಾ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಚಿತ್ರರಂಗದಿಂದ ಧಾರಾವಾಹಿ ರಂಗಕ್ಕೆ ಕಾಲಿಡ್ತಾ ಇರೋ ದಿವ್ಯಾಗೆ ಈ ಧಾರಾವಾಹಿಯಲ್ಲೂ ಸಿನಿಮಾ ನಟಿಯ ಪಾತ್ರವೇ ಅನ್ನುವುದು ವಿಶೇಷ.

ಸೂಪರ್ ಸ್ಟಾರಾಗಿದ್ದರೂ ಅಮ್ಮನ ಪ್ರೀತಿಗಾಗಿ ಹಂಬಲಿಸುವ ಸರಳ ಮನಸ್ಸಿನ ನಟಿ ರಚನಾ ಆಗಿ ಅಭಿನಯಿಸಿರುವ ದಿವ್ಯಾ 'ನಿನಗಾಗಿ' ಧಾರಾವಾಹಿಯ ಮುಖ್ಯ ಆಕರ್ಷಣೆಯಾದರೆ, 'ಗಿಣಿರಾಮ' ಧಾರಾವಾಹಿಯಲ್ಲಿ ಶಿವರಾಮನಾಗಿ ಜನಮೆಚ್ಚುಗೆ ಗಳಿಸಿದ್ದ ಋತ್ವಿಕ್ ಮಠಾಡ್ ಈ ಕತೆಯ ನಾಯಕ.

ಮಗಳ ಯಶಸ್ಸನ್ನು ಬಳಸಿಕೊಳ್ಳುವತ್ತಲೇ ಮನಸ್ಸು ನೆಟ್ಟ ದರ್ಪದ ತಾಯಿ ವಜ್ರೇಶ್ವರಿಯ ಪಾತ್ರ ಈಗಾಗಲೇ 'ನಿನಗಾಗಿ'ಯ ಪ್ರೊಮೊ ನೋಡಿದ ಪ್ರತಿಯೊಬ್ಬರಲ್ಲೂ ಅಚ್ಚಳಿಯದೆ ದಾಖಲಾಗಿದೆ. ಜನಪ್ರಿಯತೆಯ ಬದುಕಿನಿಂದ ದೂರ ಒಂದು ಸರಳ ಬದುಕನ್ನು ಬಯಸುತ್ತಿರುವ ರಚನಾ ಕನಸಿಗೆ ಅವಳಮ್ಮನೇ ಅಡ್ಡಗಾಲಾದಾಗ ಕತೆ ಕುತೂಹಲಕರ ತಿರುವುಗಳನ್ನು ತೆಗೆದುಕೊಳ್ಳುತ್ತದೆ. ಇದರ ಮಧ್ಯೆ ಫುಡ್ ಟ್ರಕ್ ನಡೆಸುತ್ತಿರುವ ಒಂದು ಮಗುವಿನ ತಂದೆ ಜೀವ ಕೂಡ ಇದ್ದಾನೆ. ಅವರ ಪುಟ್ಟ ಮಗಳು, ರಚನಾಳನ್ನು ತಾಯಿಯಂತೆ ಹಚ್ಚಿಕೊಳ್ಳಲು ಶುರು ಮಾಡಿದಾಗ ಎಲ್ಲವೂ ಸಂಕೀರ್ಣವಾಗ ತೊಡಗುತ್ತದೆ. ತನ್ನ ತಾಯಿಯ ಬಂಗಾರದ ಪಂಜರದಲ್ಲಿ ಸಿಲುಕಿದ ರಚನಾಗೆ, ತನ್ನ ಬದುಕಿನಲ್ಲಿ ಏಳುತ್ತಿರುವ ಹೊಸ ಬಿರುಗಾಳಿಯನ್ನು ನಿಭಾಯಿಸುವ ಶಕ್ತಿಯಿದೆಯೇ ಎಂಬುದನ್ನು ಕಾದು ನೋಡಬೇಕು.

ಗತ್ತಿನ ಅಮ್ಮನ ಪಾತ್ರದಲ್ಲಿ ಕ್ಲಾಸಿಕಲ್ ನೃತ್ಯಪಟು ಸೋನಿಯಾ ಪೊಣ್ಣಮ್ಮ ಗಮನ ಸೆಳೆಯಲಿದ್ದಾರೆ. ನಾಯಕ, ನಾಯಕಿ ಮತ್ತು ಖಳನಾಯಕಿಯಲ್ಲದೆ 'ನಿನಗಾಗಿ' ಧಾರಾವಾಹಿಯಲ್ಲಿ ಒಂದು ಮುದ್ದಾದ ಪುಟಾಣಿ ಹುಡುಗಿಯೂ ನಿಮ್ಮ ಮನಗೆಲ್ಲಲು ಕಾದಿದ್ದಾಳೆ. ಈಗಾಗಲೇ ತಂಡದ ಅಚ್ಚುಮೆಚ್ಚಾಗಿರುವ ಪುಟಾಣಿ ಸಿರಿ, ನಿಮ್ಮ ಮನಸಿಗೂ ಬಹುಬೇಗ ಲಗ್ಗೆಯಿಡಲಿದ್ದಾಳೆ.

ತಾರಾಗಣದಲ್ಲಿ ಪ್ರಿಯಾಂಕ ಕಾಮತ್, ಕಿಶನ್ ಬೆಳಗಲಿ, ವಿಜಯ್ ಕೌಂಡಿನ್ಯ ಮುಂತಾದವರಿದ್ದಾರೆ.

ತಮ್ಮ ಹೊಸ ಸಾಹಸದ ಬಗ್ಗೆ ಉತ್ಸುಕತೆಯಿಂದ ಮಾತನಾಡಿದ ದಿವ್ಯಾ 'ನಿನಗಾಗಿ'ಯ ಚಿತ್ರೀಕರಣ ಸಿನಿಮಾದಷ್ಟೇ ಅದ್ದೂರಿಯಾಗಿ ನಡೀತಿರೋದ್ರಿಂದ ಸಿನಿಮಾದಿಂದ ಸೀರಿಯಲ್ಲಿಗೆ ಬಂದಂತೆ ಅನಿಸುತ್ತಲೇ ಇಲ್ಲ ಅಂತಾರೆ.

ತಮ್ಮ ಹೊಸ ಧಾರಾವಾಹಿಯ ಬಗ್ಗೆ ಮಾತನಾಡಿದ ಋತ್ವಿಕ್, ಗಿಣಿರಾಮದ ಶಿವರಾಮನ ಮಾಸ್ ಪಾತ್ರಕ್ಕೂ ಇದಕ್ಕೂ ತುಂಬಾ ವ್ಯತ್ಯಾಸವಿದೆ ಎಂದರು.

ನಮ್ಮನೆ ಯುವರಾಣಿಯನ್ನು ನಿರ್ದೇಶಿಸಿದ್ದ ಸಂಪೃಥ್ವಿ 'ನಿನಗಾಗಿ'ಯ ಸೂತ್ರಧಾರಿ. 'ನಿನಗಾಗಿ'ಯ ಬಗ್ಗೆ ಅವರು ಆಡಿದ ಮಾತುಗಳಲ್ಲಿ ಒಂದೊಳ್ಳೆ ಕತೆಯನ್ನು ವೀಕ್ಷಕರಿಗೆ ಕೊಡುತ್ತಿರುವ ಖುಷಿ ಹಾಗೂ ಆತ್ಮವಿಶ್ವಾಸ ಎದ್ದು ಕಾಣುತ್ತಿತ್ತು.

ಮೇ 27ನೇ ತಾರೀಖಿನಿಂದ ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿದಿನ ರಾತ್ರಿ 8 ಗಂಟೆಗೆ ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ನಿನಗಾಗಿ', ಈವರೆಗಿನ ಲಕ್ಷಣಗಳನ್ನು ಆಧರಿಸಿ ನೋಡುವುದಾದರೆ, ಕನ್ನಡ ಕಿರುತೆರೆಯ ಮುಂದಿನ ಸೂಪರ್ ಹಿಟ್ ಶೋ ಆಗುವುದು ಖಂಡಿತ. ■

### ಕನ್ನಡ ವೀಕ್ಷಕರು ಇಷ್ಟಪಡುವ ವಿಶ್ವಾಸವಿದೆ: ಪ್ರಶಾಂತ್

'ನಿನಗಾಗಿ'ಯನ್ನು ಕನ್ನಡ ವೀಕ್ಷಕರು ಇಷ್ಟಪಡುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಕಲರ್ಸ್ ಕನ್ನಡದ ಬ್ಯುಸಿನೆಸ್ ಹೆಡ್ ಪ್ರಶಾಂತ್ ನಾಯಕ್, ನಮ್ಮ ಚಾನೆಲ್ ಯಾವಾಗಲೂ ಕೌಟುಂಬಿಕ ಮೌಲ್ಯಗಳನ್ನು ಬಿಂಬಿಸುವ ಮನ ಮುಟ್ಟುವ ಕತೆಗಳನ್ನು ಕೊಡುತ್ತಾ ಬಂದಿದೆ. 'ನಿನಗಾಗಿ' ಅದರ ಮುಂದುವರಿಕೆಯಾಗಿದ್ದು ವಿಭಿನ್ನ ಜಗತ್ತುಗಳಿಂದ ಬಂದ ಇಬ್ಬರು ಒಟ್ಟಿಗೆ ನಡೆಸುವ ಈ ಪಯಣ ಎಲ್ಲರಿಗೂ ಇಷ್ಟವಾಗುತ್ತದೆ ಎಂದರು.

ಭಾಗ್ಯಲಕ್ಷ್ಮಿ, ನಮ್ಮನೆ ಯುವರಾಣಿ, ಕನ್ನಡತಿಯಂಥ ಸೂಪರ್ ಹಿಟ್ ಧಾರಾವಾಹಿಗಳನ್ನು ನಿರ್ಮಿಸಿದ ಜೈ ಮಾತಾ ಕಂಬೈನ್ಸ್ 'ನಿನಗಾಗಿ'ಯ ನಿರ್ಮಾಣದ ಹೊಣೆ ಹೊತ್ತಿದೆ. ಈ ಪ್ರಾಜೆಕ್ಟಿನ ಬಗ್ಗೆ ಅತೀವ ವಿಶ್ವಾಸ ವ್ಯಕ್ತಪಡಿಸಿದ ನಿರ್ಮಾಪಕಿ ತಶ್ವಿನಿ ಪ್ರಕಾಶ್, 'ಈ ಕತೆ ಎಷ್ಟು ವಿಶೇಷವಾಗಿದೆ ಅಂದ್ರೆ ಕೇಳಿದ ತಕ್ಷಣವೇ ಇದನ್ನು ನಾನೇ ಮಾಡಬೇಕು ಅಂತ ನಿರ್ಧಾರ ಮಾಡಿಬಿಟ್ಟೆ' ಎಂದರು.